ಸಹಾಯಕ ಕಾರ್ಯಪಾಲಕ ಅಭಿಯಂತರರ ಕಛೇರಿ,
ವಿಧಾನಸೌಧ ಸೌತ್‌ಬ್ಲಾಕ್ ಉಪವಿಭಾಗ,
ವಿಕಾಸಸೌಧ, ಕೊ.ಸಂ:125, ಬೆಂಗಳೂರು

ದೂರವಾಣಿ:22034414
e-mail:aeevssb@gmail.com

**ಲೋಕೋಪಯೋಗಿ ಇಲಾಖೆ**

ಸಂಖ್ಯೆ:ಸಕಾಅ:ವಿಸೌಸೌಬ್ಲಾ:ಎಇ-3:2026-27 / 544 ದಿನಾಂಕ: 22/09/2026

ಇವರಿಗೆ,

Smt. K.K. Indira Devi,
Trustee, kashipathi Educational Trust(R),
Vidya Siri International School,
Survey No.67/4, Off Sarjapur Road,
Kodathi, Bengaluru-560035

ಮಾನ್ಯರೆ,

ವಿಷಯ: ಕಟ್ಟಡ ಸುರಕ್ಷತಾ ಪ್ರಮಾಣ ನೀಡುವ ಬಗ್ಗೆ.

ಉಲ್ಲೇಖ:
1. ಕರ್ನಾಟಕ ಸರ್ಕಾರ ಅಪರ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ ರವರ ಸುತ್ತೋಲೆ ಪತ್ರ ಸಂಖ್ಯೆ: ಲೋಇ:59:ಬಿಇಡಿ:2019, ಬೆಂಗಳೂರು, ದಿನಾಂಕ:06.05.2022.
2. ತಮ್ಮ ಮನವಿ ಪತ್ರ ದಿನಾಂಕ:09.09.2026

– – –

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ, The kashipathi Educational Trust(R) ವತಿಯಿಂದ ನಡೆಸುತ್ತಿರುವ Vidya Siri International School, Survey No.67/4, Off Sarjapur Road, Kodathi, Bengaluru-560035, ಇಲ್ಲಿನ ಶಾಲಾ ಕಟ್ಟಡಕ್ಕೆ ಸುರಕ್ಷತಾ ಪ್ರಮಾಣ ಪತ್ರವನ್ನು ನೀಡುವಂತೆ ಉಲ್ಲೇಖ(3)ರ ಪತ್ರದಲ್ಲಿ ಮನವಿ ಸಲ್ಲಿಸಿರುತ್ತೀರಿ.

ಅದರಂತೆ, The kashipathi Educational Trust(R) ವತಿಯಿಂದ ನಡೆಸುತ್ತಿರುವ Vidya Siri International School, Survey No.67/4, Off Sarjapur Road, Kodathi, Bengaluru-560035 ಇಲ್ಲಿನ ಶಾಲಾ ಕಟ್ಟಡವನ್ನು ದಿನಾಂಕ:11.09.2026 ರಂದು ಸಂಬಂಧಪಟ್ಟ ಇಂಜಿನೀಯರ್‌ರೊಂದಿಗೆ ಸದರಿ ಶಾಲಾ ಕಟ್ಟಡವನ್ನು ಪರಿವೀಕ್ಷಣೆ ಮಾಡಲಾಗಿ, ಕಟ್ಟಡವು ನೆಲಮಹಡಿಯೊಂದಿಗೆ ನಾಲ್ಕು ಮೇಲ್ಮಹಡಿಗಳನ್ನು ಹೊಂದಿದ್ದು, ಸದರಿ ಕಟ್ಟಡವನ್ನು 2025 ರಲ್ಲಿ ನಿರ್ಮಾಣ ಮಾಡಲಾಗಿರುತ್ತದೆ ಎಂದು ಪರಿವೀಕ್ಷಣಾ ಸಮಯದಲ್ಲಿ ತಿಳಿಸಿರುತ್ತೀರಿ. ಕಟ್ಟಡವು ಗ್ರಾನೈಟ್ ನೆಲಹಾಸ, ಕಬ್ಬಿಣದ ಕಿಟಕಿಗಳು ಮತ್ತು ಜಿ.ಐ ಬಾಗಿಲುಗಳನ್ನು ಅಳವಡಿಸಲಾಗಿದ್ದು, ಒಟ್ಟು 33 ರೂಮ್‌ಗಳೊಂದಿಗೆ (Block-1,G+4) ಪ್ರತಿ ಮಹಡಿಯಲ್ಲಿ ಶೌಚಾಲಯಗಳನ್ನು ನಿರ್ಮಿಸುವುದು ಕಂಡುಬಂದಿರುತ್ತದೆ.

ಕಟ್ಟಡಕ್ಕೆ ಸಂಬಂಧಪಟ್ಟ ನೆಲಮಹಡಿಯ ಕಾಂಕ್ರೀಟ್ ಗ್ರೇಡ್, ಸ್ಟೀಲ್, ಸಿಮೆಂಟ್, ಮರಳು ಇತ್ಯಾದಿ ಕಟ್ಟಡದ ನಿರ್ಮಾಣ ಕಾಮಗಾರಿಗೆ ಅಳವಡಿಸುವ ಸಾಮಾಗ್ರಿಗಳ ಪರೀಕ್ಷೆ ವರದಿಗಳನ್ನು ಇಲ್ಲದಿರುವ

ಕಾರಣದಿಂದ ಉಲ್ಲೇಖ(1)ರ ಸರ್ಕಾರದ ಸುತ್ತೋಲೆಯಲ್ಲಿ ಸೂಚಿಸಿರುವಂತೆ ಎರಡು ರೀತಿಯ Non Destructive Test ಗಳನ್ನು ಕೈಗೊಳ್ಳಲಾಗಿರುತ್ತದೆ.

ಮುಂದುವರೆದು, M.A.Associates, Near Old ZP Office Road, T.R Nagar, Challakere, -577522 ರವರಿಂದ Ultrasonic Pulse Velocity Test ಮತ್ತು Report Rebound Hammer Test ಗಳನ್ನು ಪರೀಕ್ಷಿಸಿ ನೀಡಿರುವ ವರದಿಯಲ್ಲಿ The Structure is Safe for Occupation ಎಂದು ದೃಢೀಕರಿಸಿರುತ್ತಾರೆ.

**ತಾವುಗಳು ಈ ಕೆಳಕಂಡ ಅಗತ್ಯ ದಾಖಲೆಗಳನ್ನು ಸಲ್ಲಿಸಿರುತ್ತೀರಿ–**

1. Ultra Pulse Velocity Test Report.
2. Rebound Hammer Test Result.

ಉಲ್ಲೇಖ(1)ರ ಸರ್ಕಾರದ ಸುತ್ತೋಲೆಯಲ್ಲಿನ ಕ್ರಮ ಸಂಖ್ಯೆ (2) ರಲ್ಲಿ ಸೂಚಿಸಿರುವಂತೆ ನಗರ ಪ್ರದೇಶದಲ್ಲಿ ಒಂದು ಶಾಲೆಗೆ– ರೂ.5000.00 ಗಳನ್ನು ಶುಲ್ಕವಾಗಿ ಪಾವತಿಸಲು ಸೂಚಿಸಿರುವ ಹಿನ್ನಲೆಯಲ್ಲಿ ಸದರಿ ಸಂಸ್ಥೆಯವರು ಚಲನ್ ಉಲ್ಲೇಖ ಸಂಖ್ಯೆ: CR092600590336920 ರಲ್ಲಿ ರೂ.5000.00 ಗಳನ್ನು ಪಾವತಿಸಿರುತ್ತಾರೆ.

ಸದರಿ ಶಾಲಾ ಕಟ್ಟಡದ ಮಹಡಿ ಹಾಗೂ ಪ್ರಮುಖ ಭಾಗಗಳನ್ನು ಪರಿಶೀಲಿಸಲಾಯಿತು. ಮುಂದಿನ ದಿನಗಳಲ್ಲಿ ಕಟ್ಟಡದಲ್ಲಿ ಯಾವುದಾದರೂ ಬದಲಾವಣೆ ಅಥವಾ ಹೆಚ್ಚುವರಿಯಾಗಿ ನಿರ್ಮಾಣ ಮಾಡಿದ್ದಲ್ಲಿ ಸದರಿ ಪ್ರಮಾಣ ಪತ್ರವು ತನ್ನಿಂತಾನೆ ರದ್ದುಗೊಳ್ಳುವುದು. ಆದ್ದರಿಂದ ಸದರಿ ಪ್ರಮಾಣ ಪತ್ರವನ್ನು The kashipathi Educational Trust(R) ವತಿಯಿಂದ ನಡೆಸುತ್ತಿರುವ Vidya Siri International School, Survey No.67/4, Off Sarjapur Road, Kodathi, Bengaluru-560035 ಇಲ್ಲಿನ ಶಾಲಾ ಕಟ್ಟಡಕ್ಕೆ ಶೈಕ್ಷಣಿಕ ಉದ್ದೇಶಕ್ಕಾಗಿ ಮಾತ್ರ ಬಳಸಿಕೊಳ್ಳಲು ಸುರಕ್ಷತಾ ಪ್ರಮಾಣ ಪತ್ರವನ್ನು ನೀಡಲಾಗಿದೆ.

ತಮ್ಮ ವಿಶ್ವಾಸಿ,

ಸಹಾಯಕ ಕಾರ್ಯಪಾಲಕ ಅಭಿಯಂತರರು,
ವಿಧಾನಸೌಧ ಕಟ್ಟಡಗಳ ಉಪವಿಭಾಗ,
ವಿಕಾಸಸೌಧ, ಬೆಂಗಳೂರು.

Assistant Executive Engineer
No.125, Vikasa Soudha,
Bangalore.